ಶ್ರೀ ಎಸ್.ಕುಮಾರ್ ಬಂಗಾರಪ್ಪ :- ಮಾನ್ಯ ಅಧ್ಯಕ್ಷರೆ, ಮಾನ್ಯ ಭೈರೇಗೌಡರು ಹೇಳಿರತಕ್ಕ ವಿಚಾರ ಅಂದರೆ ಯಾರಿಗೆ ಟೆಂಡರ್ ಆಗಿದೆ? ಟೆಂಡರ್ ಲ್ಯಾಪ್ಸ್ ಆಗಿದೆಯೇ ಎಂಬ ಇತ್ಯಾದಿ ವಿಚಾರ ನನಗೆ ಈಗ ಗೊತ್ತಿಲ್ಲ. ಈ ಬಗ್ಗೆ ಸಂಪೂರ್ಣವಾಗಿರತಕ್ಕಂಥ ವಿವರವನ್ನು ನಾನು ನಾಳೆ ಬೆಳಿಗ್ಗೆ ಸದನಕ್ಕೆ ಬರುವಾಗ ತಂದು ಮಾನ್ಯ ಸದಸ್ಯರುಗಳಿಗೆ ಒದಗಿಸುತ್ತೇನೆ.

ಹೆಬ್ಬಿ ಫಾಲ್ಸ ಯೋಜನೆ ಬಗ್ಗೆ

402(3565) ಶ್ರೀ ನೀಲಕಂಠಪ್ಪ.ಬಿ.ಆರ್.(ತರೀಕೆರೆ) :- ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೆಬ್ಬಿ ಫಾಲ್ಸ್ ಮುಖಾಂತರ ಹೆಬ್ಬಫಾಲ್ಸ್ ಯೋಜನೆ ಸರ್ಕಾರದ ಮುಂದಿದೆಯೇ; ಈ ಯೋಜನೆಯ ಅಂದಾಜು ನಕ್ಷೆ ಸರ್ಕಾರದ ಮುಂದಿದೆಯೇ;

ಆ) ಈ ಯೋಜನೆಯಲ್ಲಿ ತರೀಕೆರೆ ತಾಲ್ಲೂಕಿನ ಅಮೃತಾಪುರ ಹಾಗೂ ಕಸಬಾ ಹೋಬಳಿಗಳು ಒಳಗೊಂಡಿದೆಯೇ; ಈ ಯೋಜನೆಯ ಬಗ್ಗೆ ಅಂದಾಜು ನಕ್ಷೆ ಆಗಿದೆಯೇ; ಆಗಿದ್ದರೆ ವಿವರ ನೀಡುವುದು.

ಶ್ರೀ ಎಚ್.ಕೆ.ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) :

ಅ) ಈ ರೀತಿಯ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಆರ್. ನೀಲಕಂಠಪ್ಪ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನನ್ನ (ಅ) ಪ್ರಶ್ನೆಗೆ ಈ ರೀತಿಯ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ ಎಂದು ಉತ್ತರ ನೀಡಿದ್ದಾರೆ. ಕಳೆದ ವರ್ಷ ಈ ಯೋಜನೆಗಾಗಿ 10 ಲಕ್ಷ ರೂಪಾಯಿಗಳನ್ನು ಈಗಾಗಲೇ ವಿನಿಯೋಗ ಮಾಡಲಾಗಿದೆ. ಅದೂ ಅಲ್ಲದೇ ಇದೇ ಸದನದಲ್ಲಿ ಮಾನ್ಯ ಸಚಿವರೇ ಈ ಯೋಜನೆಗೆ ಅನುಮೋದನೆ ಕೊಡುತ್ತೇನೆ ಎಂದು ಆಶ್ವಾಸನೆ ಕೊಟ್ಟಿದ್ದರು. ಇದು ನಮ್ಮ ತರೀಕೆರೆ ಕ್ಷೇತ್ರ ಮತ್ತು ಬೀರೂರು ಕ್ಷೇತ್ರ ಎರಡಕ್ಕೂ ಕೂಡ ಸಂಬಂಧಪಟ್ಟಿದೆ. ಆದರೆ ಈಗ ಮಾನ್ಯ ಸಚಿವರು ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲವೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಸೂಕ್ತ ಉತ್ತರವನ್ನು ಕೊಡಬೇಕು. ಈ ಯೋಜನೆ ಬಗ್ಗೆ ಅಂದಾಜು ನಕ್ಷೆಯನ್ನು ತಯಾರಿಸಬೇಕೆಂದು ಈಗಾಗಲೇ ಮಾನ್ಯ ಸಚಿವರು ಸೂಚನೆಯನ್ನೂ ಸಹಾ ಕೊಟ್ಟಿದ್ದಾರೆ. ಆದರೆ ಇದೂ ಕೂಡ ಇಲ್ಲವೆಂದು ಉತ್ತರದಲ್ಲಿ ಹೇಳುತ್ತಿದ್ದಾರೆ.

ಶ್ರೀ ಹೆಚ್.ಕೆ. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಕೇಳಿರುವಂತೆ ಹೆಬ್ಬಿ ಫಾಲ್ಸ್ ಯೋಜನೆ ಎಂಬ ಹೆಸರಿನಲ್ಲಿ ಯಾವುದೇ ಯೋಜನೆ ಇಲ್ಲ. ಆದರೆ ಅಮೃತಾಪುರ ಹಾಗೂ ಇತರ ಕಸಬಾ ಹೋಬಳಿಗಳಿಗೆ ನೀರನ್ನು ಒದಗಿಸುವದರ ಬಗ್ಗೆ ಮಾನ್ಯ ಸದಸ್ಯರು ಹಿಂದೆ ಏನು ಚರ್ಚೆ ಮಾಡಿದ್ದರೋ, ಆ ಚರ್ಚೆಯ ನಂತರ ಸರ್ಕಾರ ಏಪ್ರಿಲ್‌ನಲ್ಲಿ ಒಂದು ಆದೇಶವೊಂದನ್ನು ಹೊರಡಿಸಿ, ಟೋಪೋಶೀಟ್‌ನ ಆಧಾರದ ಮೇಲೆ ಏನೊಂದು ಪ್ರಾಜೆಕ್ಟ್ ಮಾಡಿದ್ದರೋ ಅದರ ಬದಲಾಗಿ ಈ

ಡೀಟೈಲ್ಡ್ ಪ್ರಾಜೆಕ್ಟ್ ಅನ್ನು ಮಾಡಬೇಕೆಂದು ಹೇಳಿದೆ. ಇದಕ್ಕೆ ಅವಶ್ಯಕವಾಗಿರತಕ್ಕಂಥ ಅನ್ವೇಷಣಾ ಕಾರ್ಯವನ್ನು ಈಗಾಗಲೇ ನಾವು ಕೈಗೆತ್ತಿಕೊಂಡಿದ್ದೇವೆ. ಮಾನ್ಯ ಸದಸ್ಯರು ಕೇಳಿರತಕ್ಕಂಥ ಹೆಸರಿನಲ್ಲಿ ವ್ಯತ್ಯಾಸ ಆಗಿತ್ತು ಎನ್ನುವಂತಹ ದೃಷ್ಟಿಯಿಂದ ಆ ರೀತಿಯ ಉತ್ತರವನ್ನು ಕೊಟ್ಟಿದ್ದೇವೆ. ದಿನಾಂಕ 29.4.2000 ಕ್ಕೆ ನಾವೇನು ಆದೇಶ ಹೊರಡಿಸಿದ್ದೆವೋ ಅದರ ಮೇರೆಗೆ ಅನ್ವೇಷಣಾ ಕಾರ್ಯಕ್ರಮ ಪ್ರಾರಂಭವಾಗಿದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ಕಳೆದ ಅಧಿವೇಶನದಲ್ಲಿ ನಾವು ಭಾರೀ ನೀರಾವರಿ ಸಚಿವರಿಗೆ ಅಭಿನಂದನೆಳನ್ನು ಸಲ್ಲಿಸಿದ್ದೆವು. ಸುಮಾರು 25 ವರ್ಷಗಳಿಂದ ಈ ಬೇಡಿಕೆ ಇದ್ದರೂ ಸಹಿತ ಯಾರೂ ಇದಕ್ಕೆ ಪುರಸ್ಕಾರ ನೀಡಿರಲಿಲ್ಲ. ಈಗಿನ ಮಾನ್ಯ ಸಚಿವರು ಇದಕ್ಕೆ ಪುರಸ್ಕಾರ ನೀಡಿ ಈ ಯೋಜನಾ ಅನ್ವೇಷಣಾ ಕಾರ್ಯಕ್ಕೆ 10 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದುದಕ್ಕಾಗಿ ನಾವು ಅವರಿಗೆ ಅಂದು ಅಭಿನಂದನೆಗಳನ್ನು ಸಲ್ಲಿಸಿದ್ದೆವು. ಅವತ್ತಿನ ದಿವಸ ಮಾನ್ಯ ಸಚಿವರು ಸದನದಲ್ಲಿ ಉತ್ತರ ಹೇಳುತ್ತಾ ಇನ್ನು ಆರು ತಿಂಗಳಿನಲ್ಲಿ ಈ ಯೋಜನೆಯನ್ನು ಮುಗಿಸುವುದಾಗಿ ಆಶ್ವಾಸನೆ ಕೊಟ್ಟಿದ್ದರು. ನಾನು ಮೊನ್ನೆ ಮಾನ್ಯ ಸಚಿವರನ್ನು ಭೇಟಿ ಮಾಡಿದಾಗಲೂ ಸಹಿತ ಇದಕ್ಕೆ ಮಂಜೂರಾತಿ ಕೊಡುತ್ತೇನೆ ಎನ್ನು ವ ಮಾತನ್ನು ಹೇಳಿದ್ದರು. ಆದರೆ ಕಾರಣಾಂತರಗಳಿಂದ ಅದು ಆಗಿಲ್ಲ. ದಯಮಾಡಿ ಅನ್ವೇಷಣಾ ಕಾರ್ಯವನ್ನು ಬೇಗ ಮುಗಿಸಿ ಈ ಒಂದು ಯೋಜನೆಗೆ ಅನುಮೋದನೆಯನ್ನು ಕೊಡಬೇಕೆಂದು ನಾನು ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ(ಕಡೂರು):- ಮಾನ್ಯ ಅಧ್ಯಕ್ಷರೆ, ಈ ಹೆಬ್ಬಿ ಫಾಲ್ಸ್ ಬಗ್ಗೆ ಒಂದು ಸಾರಿ ಮಾನ್ಯ ನೀರಾವರಿ ಸಚಿವರು ಎಲ್ಲಾ ಸಚಿವರನ್ನು ಕರೆದಂತಹ ಸಭೆಯಲ್ಲಿ ನಾನು ಮತ್ತು ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ್‌ರವರು ಇಬ್ಬರೂ ಇದ್ದೆವು. ಆಗ ಮಾನ್ಯ ಸಚಿವರು ಅದನ್ನು ಅನ್ವೇಷಣೆ ಮಾಡುತ್ತೇವೆ ಎಂದು ಹೇಳಿದ್ದರು. ಈ ಯೋಜನೆಯಿಂದ ಒಂದರಿಂದ ಒಂದೂವರೆ ಟಿ.ಎಂ.ಸಿ. ನೀರು ಬರುತ್ತದೆ. ಆ ಟಿ.ಎಂ.ಸಿ. ನೀರನ್ನು ನಮ್ಮ ಮುದುಗ ಮತ್ತು ಅಯ್ಯನಕೆರೆಗಳಿಗೆ ಲಿಂಕ್ ಮಾಡಿಕೊಟ್ಟರೆ ಕಡೂರು, ಹೊಸದುರ್ಗ ಮತ್ತು ಮಾರಿಕಣಿವೆಗೆ ನೀರನ್ನು ಕೊಡಲಿಕ್ಕೆ ಅನುಕೂಲವಾಗುತ್ತದೆ ಎಂಬ ವಿಚಾರವನ್ನೂ ಕೂಡ ನಾವು ಹಿಂದೆ ಪ್ರಸ್ತಾಪ ಮಾಡಿದ್ದೆವು. ಆದರೆ ಇಲ್ಲಿ ಮಾನ್ಯ ಸದಸ್ಯರಾದ ನೀಲಕಂಠಪ್ಪನವರು ಕೇಳಿರುವ ಪ್ರಶ್ನೆಗೆ ಉತ್ತರಿಸುತ್ತಾ ಆ ಯೋಜನೆಯೇ ಸರ್ಕಾರದ ಮುಂದಿರುವುದಿಲ್ಲ ಎಂದು ಸರ್ಕಾರ ಹೇಳಿರುವುದು ಸರಿಯಲ್ಲ ಎಂದು ನನಗನ್ನಿಸುತ್ತದೆ.

1.00 ಪಿ.ಎಂ.

ಅಲ್ಲಿ ಅನ್ವೇಷಣಾ ಕಾರ್ಯ ಇನ್ನೂ ಕೂಡ ಪ್ರಾರಂಭವಾಗಿಲ್ಲ. ಅನ್ವೇಷಣಾ ಕಾರ್ಯ ಪ್ರಾರಂಭ ಮಾಡುತ್ತೇವೆಂದು ಟೋಕನ್ ಗ್ರಾ ೃಂಟ್ ಇಟ್ಟಿದ್ದರು, ಆದರೂ ಕೂಡ ಅದು ಪ್ರಾರಂಭವಾಗಲಿಲ್ಲ. ಕಡೂರು ತಾಲ್ಲೂಕು, ಹೊಸದುರ್ಗ ತಾಲ್ಲೂಕು, ತರೀಕೆರೆ ತಾಲ್ಲೂಕು, ಮತ್ತು ಬೀರೂರು ಕ್ಷೇತ್ರಗಳಲ್ಲಿ ಆದಷ್ಟು ಬೇಗ ಪ್ರಾರಂಭ ಮಾಡಿದರೆ ಮಳೆಯಿಂದ ಅನುಭವಿಸುತ್ತಿರುವ ತೊಂದರೆ ನಿವಾರಣೆ ಯಾಗುತ್ತದೆ. ಮಗದ ಕೆರೆ ಮತ್ತು ಅಯ್ಯನಕೆರೆಯನ್ನು ಭಾರೀ ನೀರಾವರಿ ಇಲಾಖೆಗೆ ಸೇರಿಸಿಕೊಳ್ಳಬೇಕೆನ್ನುವ ವಿಚಾರವನ್ನು ತಮ್ಮ ಮುಖಾಂತರ ಅವರಿಗೆ ತಿಳಿಸುತ್ತಿದ್ದೇನೆ.

ಶ್ರೀ ಹೆಚ್.ಕೆ.ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರಲ್ಲಿ ನಾನು ಪ್ರಸ್ತಾಪಮಾಡುವುದು ಇಷ್ಟೇ, ಅನ್ವೇಷಣಾ ಕಾರ್ಯ ಪ್ರಾರಂಭವಾಗಿದೆ. ಆ ಕಾರ್ಯ ಎಲ್ಲಿಯವರೆಗೆ ಆಗಿದೆ ಎಂದು ನಾನು ತಕ್ಷಣ ರಿವ್ಯೂ ಮಾಡಿ ಸದನ ಮುಗಿಯುವುದರೊಳಗಾಗಿ ವಿವರವನ್ನು ಒದಗಿಸಿಕೊಡುತ್ತೇನೆ. ಕೆಲವು ಕೆರೆಗಳನ್ನು ಭಾರೀ ನೀರಾವರಿ ಇಲಾಖೆಗೆ ಸೇರಿಸಿಕೊಳ್ಳುವುದರ ಬಗ್ಗೆ ಪ್ರಸ್ತಾಪ ಮಾಡಿದಿರಿ, ಅದು ಅವಶ್ಯ ಇದ್ದರೆ ನಾನು ಹಾಗೂ ಸಣ್ಣ ನೀರಾವರಿ ಸಚಿವರು ಚರ್ಚೆ ಮಾಡಿ ಮುಂದಿನ ಕ್ರಮ ಜರುಗಿಸುತ್ತೇವೆ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ: - ಅನ್ವೇಷಣಾ ಕಾರ್ಯ ಎಲ್ಲಿಯವರೆಗೆ ಜರುಗಿದೆ ಎನ್ನುವ ಬಗ್ಗೆ ಅಧಿಕಾರಿಗಳನ್ನು ಕರೆದು ರಿವ್ಯೂ ಮಾಡುತ್ತೇವೆಂದು ಮಾನ್ಯ ಸಚಿವರು ಹೇಳಿದರು; ಆ ರಿವ್ಯೂ ಮೀಟಿಂಗ್ ಮಾಡುವಾಗ ನಾವು ಮೂರು ಜನ ಶಾಸಕರನ್ನು ದಯವಿಟ್ಟು ಕರೆಯಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ:- ತರೀಕೆರೆ ತಾಲ್ಲೂಕಿನ ಕೆಲವು ಭಾಗಗಳನ್ನು ಅದರಲ್ಲಿ ಸೇರಿಸಬೇಕಾಗಿದೆ. ಹಾಗೆ ಸೇರಿಸದೆ ಇದ್ದರೆ ಹಿಂದೆ ಏನಾಗಿದೆ ಎಂದರೆ ಭದ್ರಾ ಪ್ರಾಜೆಕ್ಟ್‌ನಿಂದ ಬರತಕ್ಕಂತಹ ನೀರು ಬೇರೆ ಬೇರೆ ಜಿಲ್ಲೆಗಳಿಗೆ ಹೋಗುತ್ತಿದೆ; ಹೆಬ್ಬಿ ಫಾಲ್ಸ್ ನೀರೂ ಕೂಡ ಬೇರೆ ತಾಲ್ಲೂಕುಗಳಿಗೆ ಹೋಗಲಿ, ಆದರೆ ನಮ್ಮ ತಾಲ್ಲೂಕಿನಲ್ಲಿರತಕ್ಕಂತಹ ನೀರನ್ನು ನಮಗೆ ಮೊದಲು ಉಪಯೋಗಿಸಿಕೊಳ್ಳುವಂತಹ ರೀತಿಯಲ್ಲಿ ತಾವು ಆದೇಶ ಕೊಡಬೇಕು. ಇಲ್ಲದೇ ಇದ್ದರೆ ಅಲ್ಲಿಯ ರೈತರಿಗೆ ತೊಂದರೆಯಾಗುತ್ತದೆ. ನಮ್ಮ ಭಾಗದ ರೈತರಿಗೆ ಮೊದಲು ಅನುಕೂಲ ಮಾಡಿಕೊಡಬೇಕು. ಇದನ್ನು ತರೀಕೆರೆ ತಾಲ್ಲೂಕಿಗೆ ಸೇರಿಸುವುದರಿಂದ ನಮ್ಮ ತಾಲ್ಲೂಕಿಗೆ ಮೊದಲು ನೀರು ಕೊಟ್ಟು ನಂತರ ಬೇರೆ ತಾಲ್ಲೂಕಿಗೆ ಕೊಡುವಂತಹ ಆದೇಶವನ್ನು ಹೊರಡಿಸುವ ಬಗ್ಗೆ ಮಾನ್ಯ ಸಚಿವರು ಈ ಸದನದಲ್ಲಿ ಸೂಕ್ತ ಉತ್ತರ ಕೊಡಬೇಕು.

ಶ್ರೀ ಹೆಚ್.ಕೆ.ಪಾಟೀಲ್:- ನಿಮ್ಮ ತಾಲ್ಲೂಕಿನಲ್ಲಿ ಕಸಬಾ ಹೋಬಳಿ ಕೂಡ ಬರುತ್ತದೆ.

ಶ್ರೀ ಬಿ. ಆರ್. ನೀಲಕಂಠಪ್ಪ:- ನಮ್ಮ ತಾಲ್ಲೂಕಿಗೆ ಸೇರಿದ ಯೋಜನೆ ರೂಪಿಸುವುದಕ್ಕೆ ತಾವು ಆದೇಶ ಕೊಡಬೇಕು.

ಶ್ರೀ ಹೆಚ್.ಕೆ.ಪಾಟೀಲ್:- ಮಾನ್ಯ ಅಧ್ಯಕ್ಷರೇ, ತರೀಕೆರೆ ತಾಲ್ಲೂಕು ಕಸಬಾ ಹೋಬಳಿ ಸಹ ಈ ಯೋಜನೆ ವ್ಯಾಪ್ತಿಗೆ ಸೇರುತ್ತದೆ. ಅಲ್ಲಿ ಇನ್ನೂ ಸರ್ವೆ ಕಾರ್ಯ ಪ್ರಾರಂಭವಾಗಿಲ್ಲವೆಂದು ಹೇಳುತ್ತಿದ್ದೀರಿ, ನಾನು ಅದನ್ನು ಗಮದಲ್ಲಿಟ್ಟುಕೊಂಡು ನಾಲ್ಕು ಹೋಬಳಿಗಳಲ್ಲೂ ಕೂಡ ಸರ್ವೆ ಕಾರ್ಯ ಪ್ರಾರಂಭ ಮಾಡುತ್ತೇವೆ.

ಕಾರಂಜಾ ನೀರಾವರಿ ಯೋಜನಾ ವಿಭಾಗಗಳಲ್ಲಿರುವ ಖಾಲಿ ಹುದ್ದೆಗಳನ್ನು ತುಂಬುವ ಬಗ್ಗೆ

404(3580) ಶ್ರೀ ರಾಜೇಂದ್ರ ವರ್ಮ(ಹುಲ್‌ಸೂರ್) ವಿಧಾನಸಭಾ ಸದಸ್ಯರು :- ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?